(ಶ್ರೀ ವೀರೇಂದ್ರ ಪಾಟೀಲ್)

ಇರುವ ಜಾಗವನ್ನು ನೋಡಿ ಬಂದಿದ್ದೇನೆ. ಇಲ್ಲಿನ ಇಂಜನೀಯರುಗಳಿಗೆ ಇಲ್ಲಿ ಕ್ರೆಸ್ಟ್‌ಗೇಟ್ ಹಾಕಿ ಹೆಚ್ಚು ನೀರು ಶೇಖರಣೆ ಮಾಡಿದರೆ ಕೆಳಗೆ ಇರುವ ಅಚ್ಚುಕಟ್ಟಿನ ಜಮೀನುಗಳಿಗೆ ತೊಂದರೆ ಯಾಗಬೇ ಇರುತ್ತದೆಯೇ ಇಲ್ಲವೇ ಎನ್ನುವುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ತಿಳಿಸ ಬೇಕೆಂದು ಹೇಳಲಾಗಿದೆ. ಒಂದು ವರ್ಷ ಹೆಚ್ಚು ನೀರು ಬಂದು ಕಟ್ಟೆಯಿಂದ ಹೊರಕ್ಕೆ ಹೋಗ ಬಹುದು, ಒಂದುವರ್ಷ ಕಟ್ಟೆಯಲ್ಲೇ ನೀರು ನಿಂತು ಇರಬಹುದು. ಇದೂ ಅಲ್ಲದೆ ಇಲ್ಲಿ ಎತ್ತರ ವಾಗಿ ಕಟ್ಟೆ ಕಟ್ಟಿದರೆ ಕೆಳಗೆ ಇರುವ ಜಮೀನುಗಳಿಗೆ ತೊಂದರೆ ಬರುತ್ತದೆ ಎನ್ನುವ ಒಂದು ಸಂಶಯವೂ ಬಂದಿದೆ. ಇವನ್ನೆಲ್ಲಾ ಇನ್ನೂ ಚೆನ್ನಾಗಿ ಪರಿಶೀಲನೆಮಾಡಿ ನೋಡಬೇಕಾಗಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇವರ ಕೆಳಗೆ ಗಂಡೇನಹಳ್ಳಿ ಪ್ರಾಜೆಕ್ಟ್ ಬರುತ್ತೆ. ಇದನ್ನೇಕೆ ಸರಕಾರ ಇದುವರೆಗೂ ಮಂಜೂರು ಮಾಡಿಲ್ಲ?

ಶ್ರೀ ವೀರೇಂದ್ರ ಪಾಟೀಲ್.—ಬೇರೆ ಪ್ರಶ್ನೆ ಅದರ ಬಗ್ಗೆ ಕೇಳಿದರೆ ಆಗ ಉತ್ತರ ಕೊಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಕಟ್ಟೆಯಲ್ಲಿ ಸಾಕಷ್ಟು ನೀರು ತುಂಬುತ್ತದೆ ಎಂದು ಇದ್ದರೂ ಇದರ ಕ್ಯಪಾಸಿಟಿಯನ್ನು ಸರಿಯಾಗಿ ತಿಳಿದುಕೊಂಡು ಇದು ಕ್ಷಾಮ ಪ್ರದೇಶದಲ್ಲಿರುವುದ ರಿಂದ ಇದರ ಬಗ್ಗೆ ಬೇಗನೆ ಸೂಕ್ತವಾದ ಕಾರ್ಯಕ್ರಮವನ್ನು ಸರಕಾರದವರು ಕೈಗೊಳ್ಳುತ್ತಾ ರೆಯೇ?

ಶ್ರೀ ವೀರೇಂದ್ರ ಪಾಟೀಲ್.—ನಾನಾಗಲೇ ಹೇಳಿದೆ. ಇದರ ಪರಿಶೀಲನೆ ಇನ್ನೂ ಮುಗಿದಿಲ್ಲ. ಪರಿಶೀಲನೆ ಮಾಡಿ ದೀರ್ಘಾದಷ್ಟು ನೀರು ಇದೆ ಎನ್ನುವುದು ಖಚಿತವಾದರೆ ಮತ್ತು ಇದರ ಕೆಳಗಡೆ ಇರುವ ಕ್ಯಾಚಮೆಂಟು ಏರಿಯಾಕ್ಕೆ ಯಾವ ಅನಾನುಕೂಲವೂ ಆಗದಂತೆ ಕಟ್ಟೆ ಕಟ್ಟಲು ಆಗುತ್ತದೆಯೇ ಎನ್ನುವುದನ್ನು ನೋಡಿ ಪ್ರಯತ್ನಮಾಡಬೇಕಾಗುತ್ತದೆ.

ಶ್ರೀ ಜಿ. ದುಗ್ಗಪ್ಪ.—ಇದರ ಬಗ್ಗೆ ಈಗಾಗಲೇ ಎಷ್ಟು ನೀರು ಬರುತ್ತದೆ ಎನ್ನುವ ಒಂದು ಅಂದಾಜು ಇದೆ. ಇದರಲ್ಲಿ ಹೇಳಿರುವಂತೆ ಇದರ ಆಯಕಟ್ಟು ಸುಮಾರು 5,800 ಎಕರೆಗಳಷ್ಟು ಇದೆ. ಇದೂ ಅಲ್ಲದೆ ಇನ್ನೂ ಹೆಚ್ಚು ರೈತರಿಗೆ ಹೆಚ್ಚು ನೀರು ಸಿಗಬಹುದು ಎಂದು ಇತ್ತು. ಹಿಂದೆ ಇದರ ಬಗ್ಗೆ ಸುಮಾರು 15 ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟೂ ಕೂಡ ಆಗಿತ್ತು? ಇದು ನಿಜವಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ಇದರ ಬಗ್ಗೆ ಹೇಳಿದ್ದೇನೆ. ಇದರಲ್ಲಿ ಸಾಕಾದಷ್ಟು ಹೆಚ್ಚು ನೀರು ಇದೆಯೇ ಇಲ್ಲವೇ ಎನ್ನುವುದನ್ನು ಇನ್ನೂ ಸರಿಯಾಗಿ ಪರಿಶೀಲನೆ ಮಾಡಿ ನೋಡಬೇಕಾಗಿದೆ. ಒಂದು ಸಾರಿ ನೀರು ಹೆಚ್ಚು ಹರಿದುಹೋಗುತ್ತದೆ, ಒಂದು ಸಾರಿ ಅಷ್ಟು ನೀರು ಶೇಖರವಾಗುವುದಿಲ್ಲ. ಇವನ್ನೆಲ್ಲಾ ಇನ್ನೂ ಪರಿಶೀಲನೆ ಮಾಡಿ ನೋಡಬೇಕಾಗಿದೆ. ಇದರಲ್ಲಿ 5,800 ಎಕರೆಗಳಷ್ಟು ಪ್ರದೇಶ ಡೆವಲಪ್ ಆಗುತ್ತದೆ ಎಂದು ಇದ್ದರೂ ಇದಕ್ಕಿಂತ ಇನ್ನೂ ಹೆಚ್ಚು ಪ್ರದೇಶಕ್ಕೆ ನೀರು ಸಿಗಬಹುದು ಎನ್ನುವ ವಿಚಾರವೂ ಬಂದಿದೆ. ಇದರ ಕೆಳಗೆ ಬರುವ ಧರ್ಮಪುರಿ ಅಟ್ಟುಕಟ್ಟು ಭಾಗದ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಇದನ್ನು ಪರಿಶೀಲನೆ ಮಾಡಿ ಆ ನಂತರ ಯಾವ ರೀತಿ ಡೆವಲಪ್ ಮಾಡಬಹುದು ಎನ್ನುವುದರ ಬಗ್ಗೆ ನಿರ್ಣಯ ಮಾಡ ಬೇಕು. ಇದಕ್ಕೆ ಮುಂಚೆ ಯಾವ ನಿರ್ದಾರವಾದ ನಿರ್ಣಯವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಇವನ್ನೆಲ್ಲಾ ಇನ್ನೂ ಪರಿಶೀಲನೆ ಮಾಡಬೇಕಾಗಿದೆ.

Gulbarga District Hospital

26. **Sri N. HUTCHMASTY GOWDA** (Huliyurdurga).—

Will the Minister for Health be pleased to state :—

(*a*) the total expenditure incurred for the construction of Gulbarga District Hospital and for equipment till the end of June, 1969 (details of expenditure on various items may be furnished) ;

(*b*) the bed strength of the Hospital ;

(*c*) the average number of inpatients per day during 1968-69 ?

Sri Y. RAMAKRISHNA (Minister for Health).—

(*a*) Rs. 72.78 lakhs on buildings and Rs. 7.84 lakhs on purchase of equipments.

(*b*) 260 beds.

(*c*) 226.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಆಸ್ಪತ್ರೆಯಲ್ಲಿ ಎಷ್ಟು ಜನ ರೋಗಿಗಳು ಬರುತ್ತಿದ್ದಾರೆ ಎನ್ನುವುದರ ವಿವರಗಳನ್ನು ಗಮನದಲ್ಲಿಟ್ಟುಕೊಂಡು ಇಷ್ಟು ಹಣವನ್ನು ಇಲ್ಲಿನ ಆಸ್ಪತ್ರೆ ಕಟ್ಟಡಗಳಿಗಾಗಿ ಖರ್ಚು ಮಾಡಬೇಕೆಂದು ಇಷ್ಟು ಹಣ ಖರ್ಚು ಮಾಡುತ್ತಿದ್ದೀರಾ ?

† ಶ್ರೀ ವೈ. ರಾಮಕೃಷ್ಣ—ಇಲ್ಲಿರುವ ಮೆಡಿಕಲ್ ಕಾಲೇಜು ಹಾಗೂ ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಇಷ್ಟು ವೆಚ್ಚ ಮಾಡಬೇಕೆಂದು ನಿಗದಿ ಮಾಡಲಾಗಿದೆ.

Sri D. B. KALMANKAR.—Is not the poor attendance in the hospital a bad reflection on the administration of the hospital ?

Sri Y. RAMAKRISHNA.—I do not agree.

1-30 P. M.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ಹಾಸಿಗೆಗಳ ಸಂಖ್ಯೆ ಕಡಿಮೆ ಇದೆ, ಈ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ವೈ. ರಾಮಕೃಷ್ಣ.—ಪೂರ್ತಿ ಕಟ್ಟಡ ನಮ್ಮ ವಶಕ್ಕೆ ಬಂದಿದ್ದು ಹೋದ ತಿಂಗಳಲಿ. ವಾರ್ಡ್‌ಗಳು ನಮ್ಮ ವಶಕ್ಕೆ ಬಂದಂತೆ ಹಾಸಿಗೆಗಳನ್ನು ಜಾಸ್ತಿ ಮಾಡುತ್ತೇವೆ.

ಶ್ರೀ ಎಂ. ನಾಗಪ್ಪ.—ಮೆಡಿಕಲ್ ಕಾಲೇಜ್‌ಗೋಸ್ಕರ ಈ ಆಸ್ಪತ್ರೆಯನ್ನು ಕಟ್ಟಲಾಗಿದ್ದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಆದೇಶದ ಪ್ರಕಾರ 600 ಹಾಸಿಗೆಗಳನ್ನು ಏತಕ್ಕೆ ಆಳವಡಿಸಲಾಗಿಲ್ಲ ?

ಶ್ರೀ ವೈ. ರಾಮಕೃಷ್ಣ.—ಇದಕ್ಕೆ ಉತ್ತರ ಕೊಟ್ಟಿದ್ದೇನೆ. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್ ಆಗಿರುವುದರಿಂದ ಈ ರೀತಿಯ ಆಸ್ಪತ್ರೆಯನ್ನು ನಿರ್ಮಾಣ ಮಾಡಲಾಗಿದೆ. ಕಟ್ಟಡ ಪೂರ್ತಿ ನಮ್ಮ ವಶಕ್ಕೆ ಬಂದ ನಂತರ ಹಾಸಿಗೆಗಳನ್ನು ಜಾಸ್ತಿ ಮಾಡಲಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಗುಲ್ಬರ್ಗದಲ್ಲಿ ಒಂದು ಖಾಸಗೀ ಮೆಡಿಕಲ್ ಕಾಲೇಜು ಇದ್ದು ಆ ಕಾಲೇಜ್‌ಗೆ ಅನುಕೂಲ ಮಾಡಿಕೊಡಲು ಒಬ್ಬರು ಮಂತ್ರಿಯವರ ಇಚ್ಛೆಗನುಗುಣವಾಗಿ ಈ ಜಿಲ್ಲಾ ಆಸ್ಪತ್ರೆಗೆ ಸರ್ಕಾರದವರು ಇಷ್ಟೊಂದು ಹಣವನ್ನು ದುರ್ವಿನಿಯೋಗ ಮಾಡಿದ್ದು ಸರಿಯೇ ?

ಶ್ರೀ ವೈ. ರಾಮಕೃಷ್ಣ.—ಸರಿಯಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಯಾವುದು ಸರಿಯಲ್ಲ! ಇಷ್ಟೊಂದು ಹಣ ಖರ್ಚು ಮಾಡಿದ್ದು ಸರಿಯಲ್ಲ ಎಂದು ಅರ್ಥವೇ ?

Mr. SPEAKER.—Will Sri K. H. Patil please repeat his question ?

Sri K. H. PATIL.—The Minister has agreed and I am satisfied with his answer. If he wants let him clarify.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೊದಲು ಇಲ್ಲಿ ಜಿಲ್ಲಾ ಆಸ್ಪತ್ರೆ ಇರಲಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಇತ್ತು ಎಂದು ಕಾಣುತ್ತದೆ. ವಿವರಗಳನ್ನು ತರಿಸಿ ಕೊಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ ಮಾನ್ಯ ಪಾಟೀಲ್ ಅವರು ಕೇಳಿದ ಪ್ರಶ್ನೆ ಇನ್ಸಿನ್ಯುಯೇಷನ್ ಎಂದು ಕಾಣುತ್ತದೆ. ಅವರು ಎಷ್ಟು ಸಲ ಗುಲ್ಬರ್ಗಕ್ಕೆ ಹೋಗಿ ಬಂದಿದ್ದಾರೋ ನನಗೆ ಗೊತ್ತಿಲ್ಲ. ಗುಲ್ಬರ್ಗ ಡಿವಿಜನರ್ ಹೆಡ್ ಕ್ವಾರ್ಟರ್ಸ್ ಆಗಿದೆ. ಪ್ರತಿ ವರ್ಷ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಮೊದಲು ಇದ್ದ ಜಿಲ್ಲಾ ಆಸ್ಪತ್ರೆ ಕಟ್ಟಡ ಬಹಳ ಹಳೆಯದಾಗಿತ್ತು. 110 ರಿಂದ 120ರವರೆಗೆ ಅಲ್ಲಿ ಬೆಡ್‌ಗಳು ಇದ್ದವು. ನಾನಾ ರೀತಿಯ ಸ್ಪೆಷಲಿಸ್ಟ್‌ಸ್ ಅಲ್ಲಿ ಇರಲಿಲ್ಲ. ಮತ್ತು ನಾನಾ ರೀತಿಯ ಅನುಕೂಲಗಳು ಸಹ ಇರಲಿಲ್ಲ. ಮತ್ತು ಈ ಭಾಗದ 3 ಜಿಲ್ಲೆಯ ಜನರು ಹೈದರಾಬಾದ್‌ಗೆ ಹೋದರೆ ಅಲ್ಲಿನವರು ನಮ್ಮವರಿಗೆ ಪ್ರವೇಶವನ್ನು ಕೊಡುತ್ತಿರಲಿಲ್ಲ. ಈ ಎಲ್ಲಾ ಕಾರಣಗಳಿಂದ ಈ ಜಿಲ್ಲೆಯಲ್ಲಿ ಒಂದು ದೊಡ್ಡ ಆಸ್ಪತ್ರೆಯ ಅವಶ್ಯಕತೆ ಇದೆ ಎಂದು ಕಂಡು ಬಂದಿತು. ಅಲ್ಲದೆ ಅಲ್ಲಿ ಒಂದು ಮೆಡಿಕಲ್ ಕಾಲೇಜು ಸಹ ಇದೆ. ಕಾಲೇಜು ಇದ್ದ ಮೇಲೆ ಆ ಕಾಲೇಜಿಗೆ ಬೇಕಾದ ಅನುಕೂಲಗಳನ್ನು ಸಹ ಕೊಡಬೇಕಾಗುತ್ತದೆ. ಕ್ಲಿನಿಕಲ್ ಫೆಸಿಲಿಟೀಸನ್ನು ಕೇವಲ ಗುಲ್ಬರ್ಗ ಕಾಲೇಜ್‌ನವರಿಗೆ ಮಾತ್ರ ಒದಗಿಸುತ್ತಿಲ್ಲ, ಬೆಳಗಾಂ, ಮಣಿಪಾಲ್, ಮತ್ತು ದಾವಣಗೆರೆಯಲ್ಲಿರುವ ಮೆಡಿಕಲ್ ಕಾಲೇಜ್‌ನವರಿಗೂ ಸಹ ಎಲ್ಲಾ ಅನುಕೂಲಗಳನ್ನು ಒದಗಿಸಲಾಗುತ್ತಿದೆ. ಗುಲ್ಬರ್ಗದಲ್ಲಾ ಖಾಸಗೀ ಕಾಲೇಜ್ ಇದೆ ಎಂದುಕೊಂಡು ಈ ಅನುಕೂಲಗಳನ್ನು ಕೊಡುತ್ತಿಲ್ಲ. ಗುಲ್ಬರ್ಗ ಜಿಲ್ಲೆ ಡಿವಿಜನರ್ ಹೆಡ್‌ಕ್ವಾರ್ಟರ್ ಆಗಿರುವುದರಿಂದ ಅಕ್ಕಪಕ್ಕದ ಜಿಲ್ಲೆಯ ಜನರು ಸಹ ಇಲ್ಲಿಗೆ ಬರುತ್ತಿರುವುದರಿಂದ ಎಲ್ಲಾ ಅನುಕೂಲಗಳನ್ನು ಮಾಡಿಕೊಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವಶ್ಯಕತೆ ಕತೆ ಕಂಡುಬಂದಾಗ ಕಟ್ಟಡಗಳನ್ನಾಗಲೀ ಇತರೇ ಸೌಕರ್ಯಗಳನ್ನಾಗಲೀ ಒದಗಿಸಿಕೊಡುವುದರಲ್ಲಿ ನನ್ನ ಅಭ್ಯಂತರ ಇಲ್ಲ. ನಧ್ಯಕ್ಕೆ ಅವಶ್ಯಕತೆ ಇಲ್ಲದಿದ್ದರೂ ಕೂಡ ಪೂರ್ವಭಾವಿಯಾಗಿ ಇಷ್ಟೊಂದು ಹಣವನ್ನು ಈ ಆಸ್ಪತ್ರೆಗೆ ಖರ್ಚು ಮಾಡಬೇಕಾಗಿರಲಿಲ್ಲ. ಈ ಕಾರಣದಿಂದಲಾದರೂ ಕೂಡ ಈ ಆಸ್ಪತ್ರೆಗೆ ಹೆಚ್ಚು ಹಣ ಖರ್ಚು ಮಾಡಿರುವುದು ಸರಿಯಲ್ಲ ಎಂಬುದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಈ ಬಗ್ಗೆ ಮಾನ್ಯ ಮಂತ್ರಿಯವರು ಈಗಾಗಲೇ ಹೇಳಿದ್ದಾರೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನ ಆದೇಶದ ಪ್ರಕಾರ ಮೆಡಿಕಲ್ ಕಾಲೇಜಿನ ಒಂದು ಸೀಟಿಗೆ 6-7 ಬೆಡ್‌ಸ್ಟ್ರೆನ್ತ್ ಇರಬೇಕಾಗುತ್ತದೆ. ಗುಲ್ಬರ್ಗದಲ್ಲಿ ಮೆಡಿಕಲ್ ಕಾಲೇಜ್ ಪ್ರಾರಂಭವಾಗಿ 6-7 ವರ್ಷವಾಯಿತು. ಪ್ರತಿ ವರ್ಷ ಈ ಕಾಲೇಜಿನಿಂದ ಫೈನಲ್ ಪರೀಕ್ಷೆಯಲ್ಲಿ ಡಾಕ್ಟರುಗಳು ಪಾಸಾಗಿ ಹೊರಬರುತ್ತಿದ್ದಾರೆ. ಕಾಲೇಜ್‌ನ ಸ್ಟ್ರೆನ್ತ್ ನೋಡಿಕೊಂಡು ಹಾಸಿಗೆಗಳನ್ನು ಜಾಸ್ತಿ ಮಾಡಬೇಕಾಗುತ್ತದೆ. ಕಟ್ಟಡ ತಯಾರಾಗದೆ ಬೆಡ್ ಸ್ಟ್ರೆನ್ತ್ ಜಾಸ್ತಿ ಮಾಡುವುದಕ್ಕಾಗುವುದಿಲ್ಲ ಎಕ್ವಿಪೆಮೆಂಟ್ ಪರಚೇಸ್ ಮಾಡುವುದು ಇರುತ್ತದೆ, ಕಾಟ್ ಪರಚೇಸ್ ಮಾಡುವುದು ಇರುತ್ತದೆ. ಎಲ್ಲಾ ರೀತಿಯ ಎಕ್ವಿಪೆಮೆಂಟ್ ಇಲ್ಲದೆ ಹಾಸಿಗೆಗಳನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಹಾಸಿಗೆಗಳ ಸಂಖ್ಯೆ ಕಡಿಮೆ ಇರುವುದಕ್ಕೆ ಕಾರಣ ರೋಗಿಗಳು ಬರುತ್ತಿಲ್ಲ ಎಂದು ಅರ್ಥವೇ?

ಶ್ರೀ ವೀರೇಂದ್ರ ಪಾಟೀಲ್.— ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಎಕ್ವಿಪ್‌ಮೆಂಟನ್ನು ಸ್ಟೋರ್ಸ್ ಪರ್ಚೇಸ್ ಕಮಿಟಿಯಿಂದ ಖರೀದಿ ಮಾಡಬೇಕಾಗುತ್ತದೆ. ಮತ್ತು ಎಸ್ಟಿಮೇಟ್ ತಯಾರು ಮಾಡಬೇಕಾಗುತ್ತದೆ. ಎಸ್ಟಿಮೇಟನ್ನು ಸರ್ಕಾರದವರು ಸ್ಯಾಂಕ್ಷನ್ ಮಾಡಬೇಕಾಗುತ್ತದೆ. ಈ ಕಾರಣದಿಂದ ಹಾಸಿಗೆಗಳನ್ನು ಜಾಸ್ತಿ ಮಾಡುವುದು ನಿಧಾನವಾಗಿದೆ. ರೋಗಿಗಳು ಬರುತ್ತಿಲ್ಲ ಎಂದು ಅರ್ಥವಲ್ಲ. ಅನುಕೂಲ ನೋಡಿಕೊಂಡು ಬೆಡ್ ಜಾಸ್ತಿ ಮಾಡಬೇಕಾಗುತ್ತದೆ.

Formation and Improvement of Roads in Ayacut Area of Gokak Canal and C.L.B.C.

30. Sri A. R. PANCHAGAVI (Arabhavi).—

Will the Chief Minister be pleased to state :—

(*a*) whether it has come to the notice of Government that roads in Ayacut area of the Gokak Canal and Ghataprabha Left Rank Canal in the Gokak Taluk are in a very bad condition;